# ಅಂತಃಕರಣದ ಅಪ್ಪು

'ಜಗತ್ತಿಗೆ ಕರೆಂಟ್ ಕಂಡುಹಿಡಿದಿದ್ದು ವಿಜ್ಞಾನಿಗಳೇ ಇರಬಹುದು. ಆದ್ರೆ ನಮಗೆ ಪವರ್ ಕಂಡುಹಿಡಿದಿದ್ದು ಮಾತ್ರ ನಮ್ ಅಣ್ಣಾವ್ರೆ' ಎಂದು ಬರೆದು ಪೋಸ್ಟ್ ಹಾಕಿದ್ದೆ. ಅದಕ್ಕೆ ಅಪ್ಪು ಖುಷಿಯಿಂದ 'ಸೋ ನೈಸ್' ಎಂದು ಪ್ರತಿಕ್ರಿಯಿಸಿದ್ದರು.

■ ಮಾಸ್ತಿ
ಸಿನಿಮಾ ಸಂಭಾಷಣೆಗಾರ



ಪುನೀತ್ ಮತ್ತು ವೆಟ್ರಿಮಾರನ್ ಜೊತೆಗೆ ಮಾಸ್ತಿ

'ಟಗರು' ಸಿನಿಮಾ ಬಿಡುಗಡೆಯಾಗಿ ಕೆಲವು ದಿನಗಳ ನಂತರ ಒಂದು ಫೋನ್ ಕಾಲ್ ಬಂತು. ಪುನೀತ್ ರಾಜ್‌ಕುಮಾರ್ ಅವರ ಮ್ಯಾನೇಜರ್ ಫೋನ್ ಮಾಡಿ, 'ನಾಳೆ ರಾಕ್‌ಲೈನ್ ಸ್ಟುಡಿಯೊಗೆ ನೀವು ಬರೋಕಾಗುತ್ತಾ? ನಿಮ್ಮ ಜೊತೆ ಪುನೀತ್ ರಾಜ್‌ಕುಮಾರ್ ಅವರು ಮಾತಾಡಬೇಕಂತೆ' ಅಂದ್ರು. ನಾನು 'ಖಂಡಿತವಾಗಲೂ ಬರ್ತೀನಿ' ಅಂತ ಹೇಳಿ ಮರುದಿನ ಅವರು ಹೇಳಿದ ಸಮಯಕ್ಕೆ ಸರಿಯಾಗಿ ಹೋದೆ. ಹುಡುಗನೊಬ್ಬ ಕ್ಯಾರಾವಾನಿನ ಬಾಗಿಲು ತೆರೆದು ಒಳಬಿಟ್ಟ. ಒಳಹೋಗುತ್ತಿದ್ದಂತೆ ಅಲ್ಲಿ ಕುಳಿತಿದ್ದ ಅಪ್ಪು, ತಾವೇ ಖುದ್ದು ಎದ್ದು ಬಂದು ಅಪ್ಪಿಕೊಂಡು ಬರಮಾಡಿಕೊಂಡರು.

ಸಾಮ್ರಾಟನೊಬ್ಬನ ಸರಳತೆ ಕಂಡು ಆಶ್ಚರ್ಯವಾಯಿತು. ತುಂಬು ಆಪ್ತತೆಯಿಂದ ಜೊತೆಯಲ್ಲಿ ಕೂರಿಸಿಕೊಂಡು, ತಿಂಡಿ ತಿನ್ನಿಸಿ, ಕಾಫಿ ಕುಡಿಸಿ ಸರಿಸುಮಾರು ಮುಕ್ಕಾಲು ತಾಸು 'ಟಗರು' ಸಿನಿಮಾ ಸಂಭಾಷಣೆ ಬಗ್ಗೆ ಮಾತಾಡಿದರು. 'ನಿಮ್ಮ ಜೊತೆ ಕೆಲಸ ಮಾಡಬೇಕು' ಎಂದು ಹೇಳಿದರು! ನಾನು, 'ಸರ್ ಹಾಗೇನಾದ್ರೂ ಆದ್ರೆ, ಅದು ನನ್ನ ಅದೃಷ್ಟವಲ್ಲದೇ ಮತ್ತೇನಿಲ್ಲ. ನೀವು ನನ್ನ ಬಾಲ್ಯದ ಹೀರೊ, ನಾನು ಸಣ್ಣವನಿದ್ದಾಗಿನಿಂದಲೂ ನಿಮ್ಮನ್ನು ಸ್ಫೂರ್ತಿಯಾಗಿ ತೆಗೆದುಕೊಂಡವನು' ಎಂದೆ. 'ಇನ್ನೊಂದೆರಡು ದಿನದಲ್ಲಿ ನಿಮಗೆ ಫೋನ್ ಮಾಡ್ತೀವಿ' ಎಂದರು. ಹೊರಡುವಾಗ, 'ಹೆಂಗ್ ಬಂದಿದೀರ? ಈಗ ಎಲ್ಲಿಗೆ ಹೋಗ್ಬೇಕು? ನಿಮಗೆ ಡ್ರಾಪ್ ಮಾಡಿಸ್ಲಾ?' ಎಂದೆಲ್ಲ ಕಾಳಜಿಯಿಂದ ವಿಚಾರಿಸಿಕೊಂಡರು. 'ಇಲ್ಲ ಸರ್. ನಾನು ಟೂ ವ್ಹೀಲರಲ್ಲಿ ಬಂದಿದೀನಿ, ತೊಂದರೆ ಇಲ್ಲ' ಅಂತ ಹೇಳಿ ಬಂದೆ.

ಅವರು ಹೇಳಿದಂತೆ ಎರಡು ದಿನದಲ್ಲಿ ಪುನಃ ಕರೆ ಬಂತು. ನಾನು ಸದಾಶಿವನಗರದ ಅವರ ಬಂಗಲೆಗೆ ಹೋದೆ. ನನಗಲ್ಲಿ ಮತ್ತೊಂದು ಆಶ್ಚರ್ಯ ಕಾದಿತ್ತು. ಅವರ ಮನೆಯ ಪಡಸಾಲೆಯಲ್ಲಿ ಅಪ್ಪು ಅವರ ಜೊತೆ ತಮಿಳಿನ ಖ್ಯಾತ ನಿರ್ದೇಶಕ ವೆಟ್ರಿಮಾರನ್ ಕುಳಿತಿದ್ದರು! ಅವರಿಗೆ ನನ್ನನ್ನು ಪರಿಚಯಿಸಿದರು. ನಾನು ಖುಷಿಯಿಂದ, ಅಷ್ಟೇ ಭಯದಿಂದ ಎರಡೂ ಕೈಎತ್ತಿ ನಮಸ್ಕರಿಸುತ್ತಾ ಅವರೊಟ್ಟಿಗೆ ನನಗೆ ಬರುವ ತಮಿಳನ್ನೆಲ್ಲಾ ಉಪಯೋಗಿಸಿ ಮಾತನಾಡಲು ಶುರು ಮಾಡಿದೆ.

ಅವರು ಪುನೀತ್ ಜೊತೆ ಒಂದು ಸಿನಿಮಾ ಮಾಡಬೇಕಿತ್ತು. ಅದರ ಸಂಭಾಷಣೆಗೆಂದು ನನ್ನನ್ನು ಕರೆಸಿದ್ದರು. ನಾನೂ ಮನಸ್ಸಿನಿಂದ ಅದನ್ನ ಬರೆಯಬೇಕು ಅಂತ ಕನಸು ಕಂಡಿದ್ದೆ. ಅದ್ಯಾಕೋ ಆ ಸಿನಿಮಾ ಸೆಟ್ಟೇರಲಿಲ್ಲ; ನನಗೆ ಪುನೀತ್ ಜೊತೆಗೆ ಕೆಲಸ ಮಾಡುವ ಭಾಗ್ಯ ಸಿಗಲಿಲ್ಲ. ಆದರೆ ಮುಂದೆ ಅವರ ಪಿಆರ್‌ಕೆ ಬ್ಯಾನರಿನಲ್ಲಿ ನಿರ್ಮಿಸಲ್ಪಟ್ಟ 'ಫ್ಯಾಮಿಲಿ ಪ್ಯಾಕ್' ಚಿತ್ರಕ್ಕೆ ಸಂಭಾಷಣೆ ಬರೆಯುವ ಅವಕಾಶ ದೊರೆಯಿತು.

ಆ ಚಿತ್ರದ ಕೊನೆಯ ದಿನದ ಚಿತ್ರೀಕರಣ ಕೆಂಗೇರಿಯ ಒಂದು ಬಂಗಲೆಯಲ್ಲಿ ನಡೆಯುತ್ತಿತ್ತು. ನಾನೂ ಸೆಟ್ಟಲ್ಲಿದ್ದೆ. ಆವತ್ತೇ ನನ್ನ ಜನುಮದಿನ! ಅದೇನು ಕಾಕತಾಳಿಯವೋ ಗೊತ್ತಿಲ್ಲ, ಪುನೀತ್ ಮತ್ತು ಅವರ ಮಡದಿ ಅಶ್ವಿನಿ ಚಿತ್ರೀಕರಣದ ಜಾಗಕ್ಕೆ ಭೇಟಿ ನೀಡಿದರು. ನಾಯಕ ಲಿಖಿತ್ ಶೆಟ್ಟಿ ಅಲ್ಲಿಗೇ ಒಂದು ಕೇಕ್ ತರಿಸಿ ಎಲ್ಲರನ್ನೂ ನನ್ನ ಸುತ್ತ ನಿಲ್ಲಿಸಿ ಕೇಕ್ ಕಟ್ ಮಾಡಿಸಿದರು. ಎಲ್ಲರೂ ವಿಶ್ ಮಾಡಿ ಕೇಕ್ ತಿನ್ನಿಸಿದರು. ನಾನೂ ಅವರಿಗೆ ತಿನ್ನಿಸಿದೆ. ಆದರೆ ನಾನು ಅಪ್ಪುಗೆ ತಿನ್ನಿಸಲಿಲ್ಲ, ಕಾರಣ ಅದರಲ್ಲಿ ವಿಪರೀತ ಕ್ರೀಂ ಇರುತ್ತದೆ ಮತ್ತೆ ಅಪ್ಪು ಸಾರ್ ಡಯಟ್ ಅಲ್ಲಿ ಇರುತ್ತಾರೆ ಎಂದು. ಅವರೂ ಒಂದು ಸಣ್ಣ ತುಂಡೂ ತಿನ್ನಲಿಲ್ಲ. ಅವರ ಆಹಾರ ಪದ್ಧತಿ ಅಷ್ಟು ಶಿಸ್ತಾಗಿರುತ್ತಿತ್ತು.

ಒಮ್ಮೆ ಅವರ ಬರ್ತಡೇ ದಿನ ನಾನು ನನ್ನ ಫೇಸ್‌ಬುಕ್ ಖಾತೆಯಲ್ಲಿ 'ಜಗತ್ತಿಗೆ ಕರೆಂಟ್ ಕಂಡುಹಿಡಿದಿದ್ದು ವಿಜ್ಞಾನಿಗಳೇ ಇರಬಹುದು. ಆದ್ರೆ ನಮಗೆ ಪವರ್ ಕಂಡುಹಿಡಿದಿದ್ದು ಮಾತ್ರ ನಮ್ ಅಣ್ಣಾವ್ರೆ' ಎಂದು ಬರೆದು ಪೋಸ್ಟ್ ಹಾಕಿದ್ದೆ. ಅದನ್ನು ಪರಿಚಯದ ಪತ್ರಕರ್ತರೊಬ್ಬರು ಅಪ್ಪುಗೇ ವಾಟ್ಸ್‌ಆ್ಯಪ್ ಮಾಡಿದ್ದಾರೆ; ಅದಕ್ಕೆ ಅವರು ಖುಷಿಯಿಂದ, 'ಸೋ ನೈಸ್' ಎಂದು ಉತ್ತರಿಸಿದ್ದರು. ನನ್ನ ಅನುಭವ ಒಂದು ಉದಾಹರಣೆಯಷ್ಟೆ, ಯಾರದೇ ಕೆಲಸ ಇಷ್ಟವಾದರೂ ಪುನೀತ್ ಅವರ ಬೆನ್ನುತಟ್ಟುತ್ತಿದ್ದರು. ಕರೆದು ಮಾತಾಡಿಸುತ್ತಿದ್ದರು. ಅವರ ಜೊತೆಗೆ ಕೆಲಸ ಮಾಡಬೇಕು ಎಂದು ಬಯಸುತ್ತಿದ್ದರು. ಅದು ಅವರ ವ್ಯಕ್ತಿತ್ವವೇ ಆಗಿತ್ತು. ಇಂಥ ನೂರು ನೂರು ಉದಾಹರಣೆಗಳನ್ನು ಹೇಳಬಹುದು. ■

**ಮಾತು ಮೆಲುಕು**

ನನಗೆ ತುಂಬ ಜನರು ಹೇಳುತ್ತಿದ್ದರು: 'ನಿಮಗೇನ್ರಿ, ತಂದೆಯವರು ಗಾಡ್‌ಫಾದರ್. ತಂದೆಯ ಹೆಸರಿಂದ ನೀವು ಕ್ಲಿಕ್ ಆಗೇ ಆಗ್ತೀರಾ'. ಅದು ಸುಳ್ಳು. ಒಬ್ಬರು ಕ್ಲಿಕ್ ಆಗಲಿಕ್ಕೆ ಕಷ್ಟಪಟ್ಟು ದುಡಿಯಬೇಕೇ ವಿನಾ ಯಾರ ಹೆಸರಿನಿಂದಲೂ ಅದು ಸಾಧ್ಯವಿಲ್ಲ. ನಮ್ಮ ಭವಿಷ್ಯ ನಮ್ಮ ಶ್ರಮದಿಂದಲೇ ರೂಪುಗೊಳ್ಳುವುದು.